ಈ) ಇನ್ನೂ ಕಟ್ಟಡ ಪೂರ್ಣಗೊಳ್ಳದೇ ಇರಲು ಕಾರಣವೇನು?

ಉ) ಕಟ್ಟಡ ಪೂರ್ಣಗೊಳ್ಳಲು ಎಷ್ಟು ಸಮಯ ಬೇಕಾಗುವುದು?

ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

2000-2001ನೇ ಸಾಲಿಗೆ 994.02 ಲಕ್ಷ ರೂಪಾಯಿಗಳು ಬೇಕಾಗಿದ್ದು, ಸದರಿ ಸಾಲಿಗೆ ಮೊತ್ತ 10.00 ಲಕ್ಷ ರೂಪಾಯಿಗಳನ್ನು ಅಯವ್ಯಯದಲ್ಲಿ ನಿಗದಿಪಡಿಸಿದೆ.

ಆ) ಹೌದು.

ಕಾರವಾರ ತಾಲ್ಲೂಕು	-	ಸ್ವಂತ ಕಟ್ಟಡ ಇದೆ.
ಹಳಿಯಾಳ ತಾಲ್ಲೂಕು	-	ಸ್ವಂತ ಕಟ್ಟಡ ಇದೆ.
ಮುಂಡಗೊಡ ತಾ:	-	ಸ್ವಂತ ಕಟ್ಟಡ ಇದೆ.

ಯಲ್ಲಾಪುರ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು 2.05 ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ. 2000-2001ನೇ ಸಾಲಿನಲ್ಲಿ ಈ ಕಾಮಗಾರಿಗಾಗಿ ಹಣ ಒದಗಿಸಿಲ್ಲ.

ಇ) ಹಾಲಿ ಕಟ್ಟಡ ಕಾರ್ಯ ಪೂರ್ಣಗೊಳಿಸಲು 2.05 ಲಕ್ಷ ರೂಪಾಯಿಗಳು ಬೇಕಾಗಿದೆ. ಆದರೆ, ಪ್ರಸಕ್ತ 2000-2001ನೇ ಸಾಲಿಗೆ ಯಾವುದೇ ಹಣ ಒದಗಿಸಿಲ್ಲ.

ಈ) ಹಣ ಒದಗಿಸಿಲ್ಲವಾದ್ದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿಲ್ಲ.

ಉ) ಹಣದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪೂರ್ಣಗೊಳಿಸಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು

ವರದಿಯನ್ನೊಪ್ಪಿಸುವುದು

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರ್) : ಮಾನ್ಯ ಅಧ್ಯಕ್ಷರೆ; ನಾನು ಅಂದಾಜು ಸಮಿತಿಯ ಒಂದನೇ ಹಾಗೂ 2ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.